# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1038 (1004)
2. ಸದಸ್ಯರ ಹೆಸರು : ಶ್ರೀ. ಎಸ್. ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 22.09.2022

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಮನಗರ ಜಿಲ್ಲೆ ಮಂಚನಬೆಲೆ ಜಲಾಶಯದದಿಂದ ರಾಮನಗರ ಹಾಗೂ ಮಾಗಡಿ ತಾಲ್ಲೂಕುಗಳಿಗೆ ವ್ಯವಸ್ಥಿತವಾಗಿ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆಯು<br>ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಈ ಕಾಮಗಾರಿಗಳು ಯಾವ ಹಂತದಲ್ಲಿವೆ; (ವಿವರ ನೀಡುವುದು) | **(1) ರಾಮನಗರ ಹಾಗೂ ಮಾಗಡಿ ತಾಲ್ಲೂಕು**<br>ಕಾವೇರಿ ನೀರಾವರಿ ನಿಗಮದ ವತಿಯಿಂದ ಮಂಚನಬೆಲೆ ಜಲಾಶಯದಿಂದ ರಾಮನಗರ ಹಾಗೂ ಮಾಗಡಿ ತಾಲ್ಲೂಕುಗಳಿಗೆ ವ್ಯವಸ್ಥಿತವಾಗಿ ಕುಡಿಯುವ ನೀರು ಸರಬರಾಜು ಮಾಡಲು ಸತ್ತೇಗಾಲ ಕುಡಿಯುವ ನೀರಿನ ಯೋಜನೆಯನ್ನು ಕೈಗೊಳ್ಳಲಾಗುತ್ತಿದ್ದು, ಈ ಯೋಜನೆಗೆ ಒಟ್ಟಾರೆ 3.30 ಟಿ.ಎಂ.ಸಿ ನೀರಿನ ಅವಶ್ಯಕತೆಯಿರುತ್ತದೆ.<br><br>ಈ ಯೋಜನೆಯನ್ನು ಎರಡು ಹಂತಗಳಲ್ಲಿ ಕೈಗೊಳ್ಳಲಾಗುತ್ತಿದ್ದು ಮೊದಲನೇ ಹಂತದಲ್ಲಿ ಕಾವೇರಿ ನದಿಯಿಂದ ಶಿಂಷಾ ನದಿಗೆ ಗುರುತ್ವಾಕರ್ಷಣೆ ಮೂಲಕ ನೀರನ್ನು ಹರಿಸಿ, ಎರಡನೇ ಹಂತದಲ್ಲಿ ಏತ ಮೂಲಕ ಕಣ್ವ, ವೈ.ಜಿ.ಗುಡ್ಡ ಮತ್ತು ಮಂಚನಬೆಲೆ ಜಲಾಶಯವನ್ನು ತುಂಬಿಸಿ ರಾಮನಗರ ಜಿಲ್ಲೆಗೆ ಕುಡಿಯುವ ನೀರನ್ನು ಒದಗಿಸಲು ಉದ್ದೇಶಿಸಲಾಗಿದ್ದು, ಯೋಜನೆಯ ಅಂದಾಜು ಮೊತ್ತ ರೂ.540.00 ಕೋಟಿಗಳಾಗಿರುತ್ತದೆ. ಸದರಿ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಮೆ. ಮೇಘಾ ಇಂಜಿನಿಯರ್ & ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ ಹೈದರಾಬಾದ್ ರವರಿಗೆ ದಿನಾಂಕ: 07.06.2019ರಂದು ರೂ.543.53 ಕೋಟಿ ಮೊತ್ತಕ್ಕೆ ವಹಿಸಲಾಗಿರುತ್ತದೆ. ಗುತ್ತಿಗೆಯ ಕಾಲಾವಧಿಯು 24 ತಿಂಗಳುಗಳಾಗಿದ್ದು, ದಿನಾಂಕ: 06.06.2021ರಂದು ಕಾಮಗಾರಿಯು ಮುಕ್ತಾಯವಾಗಬೇಕಾಗಿರುತ್ತದೆ.<br><br>ಮೊದಲನೇ ಹಂತದ ಕಾಮಗಾರಿಯಲ್ಲಿ ಪೈಪ್ ಲೈನ್ ಮತ್ತು ಸುರಂಗ ನಿರ್ಮಾಣ ಕಾಮಗಾರಿ ಒಳಗೊಂಡಿದ್ದು, ಈ ಪಥವು ಅರಣ್ಯ ಭಾಗದಲ್ಲಿ ಹಾದು ಹೋಗುತ್ತಿರುವುದರಿಂದ ಇದಕ್ಕೆ ಅರಣ್ಯ ಇಲಾಖೆಯ ಅನುಮತಿ ಪಡೆಯುವಲ್ಲಿ ವಿಳಂಬವಾಗಿರುತ್ತದೆ. ಅಲ್ಲದೇ 2020–21ನೇ ಸಾಲಿನಲ್ಲಿ ಕೋವಿಡ್–19 ಸಾಂಕ್ರಮಿಕ ರೋಗದ ಕಾರಣ ದೇಶದಾದ್ಯಂತ ಲಾಕ್‌ಡೌನ್ ಜಾರಿಯಿದ್ದು, ಮತ್ತು ಸ್ಥಳೀಯರು ಕಾಮಗಾರಿಯನ್ನು ನಿರ್ವಹಿಸಲು ಅಡ್ಡಿಪಡಿಸಿರುವ ಹಿನ್ನಲೆಯಲ್ಲಿ ಕಾಮಗಾರಿಯ ಪ್ರಗತಿಯು ವಿಳಂಬವಾಗಿರುತ್ತದೆ.<br><br>ಪ್ರಸ್ತುತ ಕಣ್ವ, ಮಂಚನಬೆಲೆ ಹಾಗೂ ವೈ.ಜಿ.ಗುಡ್ಡ ಜಲಾಶಯಗಳಿಗೆ ನೀರು ತುಂಬಿಸುವ ಏರು ಕೊಳವೆ ಜೋಡಣೆ ಕಾಮಗಾರಿಯು |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
| --- | --- | --- |
| | | ಶೇ.95ರಷ್ಟು ಪೂರ್ಣಗೊಂಡಿದ್ದು ಡಿಸೆಂಬರ್ – 2022 ರ ಅಂತ್ಯಕ್ಕೆ ರಾಮನಗರ ಹಾಗೂ ಮಾಗಡಿ ತಾಲ್ಲೂಕುಗಳಿಗೆ ಕುಡಿಯುವ ನೀರಿನ ಯೋಜನೆಗಾಗಿ ಕ್ರಮವಾಗಿ ಮಂಚನಬೆಲೆ ಜಲಾಶಯ ಮತ್ತು ವೈ.ಜಿ.ಗುಡ್ಡ ಕೆರೆಗೆ ನೀರನ್ನು ಹರಿಸಲಾಗುವುದು.<br><br>ಆಗಸ್ಟ್–2022ರ ಅಂತ್ಯಕ್ಕೆ ರೂ.308.12 ಕೋಟಿಗಳು ಆರ್ಥಿಕ ಪ್ರಗತಿ ಸಾಧಿಸಲಾಗಿರುತ್ತದೆ. ಪ್ರಸ್ತುತ 80% ರಷ್ಟು ಭೌತಿಕ ಕಾಮಗಾರಿ ಪೂರ್ಣಗೊಂಡಿದ್ದು ಉಳಿದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.<br><br>**(2) ಬಿಡದಿ ಪಟ್ಟಣ**<br>ನಗರಾಭಿವೃದ್ಧಿ ಇಲಾಖೆಯ ವತಿಯಿಂದ ಬಿಡದಿ ಪಟ್ಟಣ, ಕೆ.ಹೆಚ್.ಬಿ ಬಡಾವಣೆ ಮತ್ತು ಮಾರ್ಗ ಮಧ್ಯದಲ್ಲಿನ 9 ಹಳ್ಳಿಗಳಿಗೆ ಮಂಚನಬೆಲೆ ಜಲಾಶಯದಿಂದ ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ರೂ. 73.40 ಕೋಟಿ ವೆಚ್ಚದಲ್ಲಿ ಕೈಗೊಂಡಿದ್ದು, ಸದರಿ ಯೋಜನೆಯ ಕಾಮಗಾರಿಗಳನ್ನು ಮೆ॥ ಶ್ರೀ. ಅಯ್ಯಪ್ಪ ಕನ್ಸ್ಟ್ರಕ್ಷನ್ಸ್, ಹೈದರಾಬಾದ್ ಮತ್ತು ಪಿ. ಸುಧೀರ್ ನಾಯ್ಡು ಇವರಿಗೆ ವಹಿಸಲಾಗಿದೆ. ಪ್ರಸ್ತುತ ಯೋಜನೆಯ ಶೇ.45ರಷ್ಟು ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿಕೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.<br><br>ಟೆಂಡರ್ ಕರಾರಿನಂತೆ ಕಾಮಗಾರಿಗಳನ್ನು ದಿನಾಂಕ: 13.07.2022ರ ಒಳಗಾಗಿ ಪೂರ್ಣಗೊಳಿಸಬೇಕಾಗಿದ್ದು, ಕೋವಿಡ್–19 ಸಾಂಕ್ರಾಮಿಕ ಪಿಡುಗಿನ ಹಿನ್ನೆಲೆಯಲ್ಲಿ ಕಾಮಗಾರಿಗಳು ವಿಳಂಬವಾಗಿರುತ್ತದೆ ಹಾಗೂ ಬಿಡದಿ ಪುರಸಭೆ ವತಿಯಿಂದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಅವಶ್ಯವಿರುವ ಜಲಸಂಗ್ರಹಾಗಾರ ಸ್ಥಳಗಳನ್ನು ಹಸ್ತಾಂತರಿಸುವಲ್ಲಿ ವಿಳಂಬ, ಜಲಶುದ್ಧೀಕರಣ ಘಟಕದ ಸ್ಥಳ ಬದಲಾವಣೆ, ಕೆಲವು ಪ್ರದೇಶಗಳಲ್ಲಿ ಕೊಳವೆ ಮಾರ್ಗ ಅಳವಡಿಸಲು ಸ್ಥಳೀಯರ ವಿರೋಧದಿಂದಾಗಿ ಕಾಮಗಾರಿಯು ವಿಳಂಬವಾಗಿರುತ್ತದೆ ಹಾಗೂ ಕೊಳವೆ ಮಾರ್ಗ ಅಳವಡಿಸಲು ರಾಷ್ಟ್ರೀಯ ಹೆದ್ದಾರಿ ಮತ್ತು ಅರಣ್ಯ ಇಲಾಖೆಯ ವತಿಯಿಂದ ಅನುಮತಿ ದೊರಕಬೇಕಾಗಿದ್ದು, ಕಾಮಗಾರಿಗಳ ಪ್ರಗತಿಯು ಕುಂಠಿತವಾಗಿರುತ್ತದೆ. ಯೋಜನೆಯ ಎಲ್ಲಾ ಕಾಮಗಾರಿಗಳನ್ನು ಜೂನ್–2023ರ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು. |
| ಆ | ಮಂಚನಬೆಲೆ ಜಲಾಶಯದ ವ್ಯಾಪ್ತಿಯಲ್ಲಿರುವ ರೈತರು ಕೃಷಿ ಜಮೀನುಗಳಿಗೆ ನೀರು ಹರಿಸುವ ಸಂಬಂಧ ನಿರ್ಮಾಣವಾಗಿರುವ | ಮಂಚನಬೆಲೆ ಜಲಾಶಯ ಯೋಜನೆಯನ್ನು ಮಾಗಡಿ ತಾಲ್ಲೂಕು, ಮಾಡಬಾಳ್ ಹೋಬಳಿ, ಮಂಚನಬೆಲೆ ಗ್ರಾಮದ ಬಳಿ ಅರ್ಕಾವತಿ ನದಿಗೆ ಅಡ್ಡಲಾಗಿ 1991ರಲ್ಲಿ ನಿರ್ಮಿಸಲಾಗಿದೆ. ಮೂಲತಃ ಮಳೆಗಾಲದಲ್ಲಿ ಉತ್ತಮ ಮಳೆಯಾಗುವ ಸಂದರ್ಭಗಳಲ್ಲಿ ಅರ್ಕಾವತಿ |

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| | ನಾಲೆಗಳು ಅವೈಜ್ಞಾನಿಕವಾಗಿದ್ದು ಈ ನಾಲೆಗಳು ಸಂಪೂರ್ಣ ಹಾಳಾಗಿ ನೀರು ಹರಿಸಲು ಸಾಧ್ಯವಾಗದಿರುವಷ್ಟು ದುರಸ್ಥಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ನದಿಯಲ್ಲಿ ಪ್ರವಾಹ ಉಂಟಾಗಿ ನದಿ ತೀರದ ರೈತರ ಜಮೀನುಗಳಿಗೆ ನೀರು ನುಗ್ಗಿ ಅಪಾರ ಪ್ರಮಾಣದಲ್ಲಿ ನಷ್ಟ ಉಂಟಾಗುತ್ತಿದ್ದುದ್ದರಿಂದ ಮಂಚನಬೆಲೆ ಗ್ರಾಮದ ಬಳಿ ಅರ್ಕಾವತಿ ನದಿಯ ಪ್ರವಾಹವನ್ನು ತಡೆಗಟ್ಟುವ ಉದ್ದೇಶದಿಂದ ಈ ಜಲಾಶಯವನ್ನು ನಿರ್ಮಿಸಲಾಗಿರುತ್ತದೆ. ತದನಂತರ ರೈತರ ಜಮೀನುಗಳಿಗೆ ನೀರನ್ನು ನೀಡಲು ಸಹ ಉದ್ದೇಶಿಸಿ ಎಡದಂಡೆ ಹಾಗೂ ಬಲದಂಡೆ ನಾಲೆಗಳನ್ನು ನಿರ್ಮಿಸಲಾಗಿರುತ್ತದೆ. |
| ಇ | ಬಂದಿದ್ದಲ್ಲಿ ಈ ಜಲಾಶಯದ ವ್ಯಾಪ್ತಿಯಲ್ಲಿರುವ ಜಮೀನುಗಳಿಗೆ ನೀರು ಪೂರೈಕೆ ಮಾಡಲು ಕೈಗೊಂಡಿರುವ ಜಮೀನುಗಳಿಗೆ ನೀರು ಪೂರೈಕೆ ಮಾಡಲು ಕೈಗೊಂಡಿರುವ ಕ್ರಮಗಳೇನು: ಈ ಸಂಬಂಧ ಸರ್ಕಾರದ ಯಾವುದಾದರೂ ಯೋಜನೆ ರೂಪಿಸಿದೆಯೇ: ರೂಪಿಸಿದ್ದಲ್ಲಿ ವಿವರ ನೀಡುವುದು? | ಮಂಚನಬೆಲೆ ಜಲಾಶಯದ ಜಲಾನಯನ ವ್ಯಾಪ್ತಿಯಲ್ಲಿ ಕಳೆದ ಹತ್ತು ವರ್ಷಗಳಲ್ಲಿ 5 ವರ್ಷ ಮಳೆಯ ಕೊರತೆಯಿಂದ (2012-13 ರಿಂದ 2016-17 ರವರೆಗೆ) ಜಲಾಶಯದಲ್ಲಿ ನೀರಿನ ಪ್ರಮಾಣವು ತೀವ್ರ ಮಟ್ಟದಲ್ಲಿ ಕುಸಿತಗೊಂಡು ಜನ ಜಾನುವಾರುಗಳಿಗೆ ಕುಡಿಯಲು ನೀರಿನ ಅಭಾವ ಉಂಟಾಗಿತ್ತು.<br><br>ಆದುದರಿಂದ 2016-17 ನೇ ಸಾಲಿನಲ್ಲಿ ದಿನಾಂಕ: 08-03-2017 ರಂದು ಜರುಗಿದ ಮಂಚನಬೆಲೆ ಜಲಾಶಯ ಯೋಜನೆಯ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಸಮಿತಿಯು ಮಂಚನಬೆಲೆ ನದಿ ಪಾತ್ರದಲ್ಲಿ ಬರುವ ಗ್ರಾಮಗಳು ಹಾಗೂ ಮಾಗಡಿ ಮತ್ತು ರಾಮನಗರ ಪಟ್ಟಣಗಳಿಗೆ ಕುಡಿಯುವ ನೀರಿನ ಸಲುವಾಗಿ ಹಾಗೂ ಜನಜಾನುವಾರುಗಳಿಗೆ ಮಾತ್ರ ಮಂಚನಬೆಲೆ ಜಲಾಶಯದಿಂದ ನೀರನ್ನು ಹರಿಸುವಂತೆ ನಿರ್ಣಯಿಸಲಾಗಿರುತ್ತದೆ. ಅದರಂತೆ ನೀರಿನ ಲಭ್ಯತೆಯ ಆಧಾರದ ಮೇಲೆ ಕುಡಿಯುವ ನೀರಿಗಾಗಿ ಮಾತ್ರ ಜಲಾಶಯದಿಂದ ಇದುವರೆಗೂ ನೀರನ್ನು ಹರಿಸಲಾಗುತ್ತಿದೆ.<br><br>ಪ್ರಸಕ್ತ ಸಾಲಿನಲ್ಲಿ ಜಲಾಶಯವು ಪೂರ್ಣ ಮಟ್ಟದಲ್ಲಿ ತುಂಬಿದ್ದು ನೀರಾವರಿ ಸಲಹಾ ಸಮಿತಿ ಸಭೆಯನ್ನು ಆಯೋಜಿಸಿ ಸಮಿತಿಯ ನಿರ್ಣಯದಂತೆ, ನಾಲೆಗಳಲ್ಲಿ ನೀರನ್ನು ಹರಿಸಲು ಕ್ರಮ ವಹಿಸಲಾಗುವುದು.<br><br>ಮಂಚನಬೆಲೆ ಜಲಾಶಯದ ಎಡ ಮತ್ತು ಬಲದಂಡೆ ನಾಲೆಗಳು ನಿರ್ಮಾಣಗೊಂಡು ಸುಮಾರು 30 ವರ್ಷಗಳಾಗಿದ್ದು, ನಾಲೆಗಳು ಶಿಥಿಲಾವಸ್ಥೆ ತಲುಪಿರುತ್ತವೆ. ಈ ನಾಲೆಗಳ ಆಧುನೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಸರ್ವೆ ಕಾರ್ಯವನ್ನು ಕೈಗೊಳ್ಳಲಾಗಿದ್ದು, ಡಿ.ಪಿ.ಆರ್ ತಯಾರಿಕಾ ಹಂತದಲ್ಲಿರುತ್ತದೆ. |

*ಸಂಖ್ಯೆ: ಜಸಂಇ 115 ಎನ್ಎಲ್ಎ 2022*

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು